ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1278(1777)**
ಸದಸ್ಯರ ಹೆಸರು	**ಶ್ರೀ ನಿಂಗಪ್ಪ ಹೆಚ್ (ಕುಣಿಗಲ್)**
ಉತ್ತರಿಸುವ ಸಚಿವರು	**ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)**

ಅ) ರಾಜ್ಯದಲ್ಲಿ ಪಡಿತರ ವಿತರಣೆಯಲ್ಲಿ ಅವ್ಯವಸ್ಥೆಯುಂಟಾಗಿ ಬಡತನ ರೇಖೆಗಿಂತ ಕೆಳಗಿರುವವರು ಪಡಿತರ ಚೀಟಿ ಪಡೆಯುವಲ್ಲಿ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಹೌದು

ಆ) ಬಂದಿದ್ದಲ್ಲಿ, ಯಾವ ಅವಧಿಯೊಳಗಾಗಿ ಅವ್ಯವಸ್ಥೆಯನ್ನು ಸರಿಪಡಿಸಿ, ಪಡಿತರ ಚೀಟಿಯನ್ನು ವಿತರಿಸಲಾಗುವುದು,

ರಾಜ್ಯದಲ್ಲಿ ತಾತ್ಕಾಲಿಕ ಪಡಿತರ ಕೂಪನ್ ವಿತರಣೆಯಾಗಿರುತ್ತದೆ ಸಾರ್ವಜನಿಕರಿಂದ ಸ್ವೀಕರಿಸಲಾಗಿರುವ ಅಹವಾಲುಗಳ ಪರಿಶೀಲನೆ ಕಾರ್ಯ ಮುಕ್ತಾಯವಾಗಿದೆ ಹಾಗೂ ವರ್ಗ ಬದಲಾವಣೆಗೆ ಅರ್ಹರಿರುವ ಕುಟುಂಬಗಳಿಗೆ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ಮುದ್ರಿಸಿ ನೀಡಲು ಜಿಲ್ಲೆಗಳಿಗೆ ಆದೇಶಿಸಿದೆ ಹೊಸದಾಗಿ ಪಡಿತರ ಚೀಟಿ ಕೋರಿ ಬಂದ ಅಹವಾಲುಗಳನ್ನು ಮರು ಪರಿಶೀಲಿಸಲು ತಿಳಿಸಲಾಗಿದೆ ಖಾಯಂ ಪಡಿತರ ಚೀಟಿಯನ್ನು ನೀಡಲು ಕನಿಷ್ಟ 6 ತಿಂಗಳ ಕಾಲಾವಕಾಶ ಬೇಕಿರುತ್ತದೆ

ಇ) ಸಮರ್ಪಕ ಪಡಿತರ ಚೀಟಿ ವಿತರಣೆಗೂ ಮುಂಚೆ ಯೂನಿಟ್ ಪದ್ಧತಿಯನ್ನು ಜಾರಿಗೆ ತಂದಿರುವುದರಿಂದ ಅರ್ಹ ಫಲಾನುಭವಿಗಳೂ ಸಹ ಪಡಿತರಧಾನ್ಯ ಪಡೆಯುವಲ್ಲಿ ವಂಚಿತರಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ,

ಬಿಪಿಎಲ್ ಪಡಿತರ ಚೀಟಿದಾರರಿಗೆ ಫೆಬ್ರವರಿ 2007ರ ಮಾಹೆಯಿಂದ ಯೂನಿಟ್ ಆಧಾರದ ಮೇಲೆ ಆಹರಧಾನ್ಯ ವಿತರಿಸುವ ಪದ್ಧತಿ ಜಾರಿಗೆ ತರಲಾಗಿದೆ ಅದರಂತೆ, ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ 4 ಕೆಜಿ ಅಕ್ಕಿ, 1 ಕೆಜಿ ಗೋಧಿ/ರಾಗಿ, (ಪ್ರತಿ ಬಿಪಿಎಲ್ ಪಡಿತರ ಚೀಟಿಗೆ ಗರಿಷ್ಟ 25 ಕೆಜಿ ಅಕ್ಕಿ/ ಗೋಧಿ/ರಾಗಿ ಮಿತಿಗೆ ಒಳಪಟ್ಟು) ನೀಡಲಾಗುತ್ತಿದೆ ಅಂತ್ಯೋದಯ ಅನ್ನ ಯೋಜನೆ ಅಡಿಯಲ್ಲಿನ ಪಡಿತರ ಚೀಟಿದಾರರಿಗೆ ಕೇಂದ್ರ ಸರ್ಕಾರವು ನೀಡುತ್ತಿರುವಂತೆ 28 ಕೆಜಿ ಅಕ್ಕಿ, 6 ಕೆಜಿ ಗೋಧಿ ಹಂಚಿಕೆ ನೀಡಲಾಗುತ್ತಿದೆ ಅನ್ನಪೂರ್ಣ ಪಡಿತರ ಚೀಟಿದಾರರಿಗೆ ಉಚಿತವಾಗಿ 10 ಕೆ ಜಿ ಅಕ್ಕಿಯನ್ನು ವಿತರಿಸಲಾಗುತ್ತಿದೆ ಈ ರೀತಿಯಾಗಿ ಯೂನಿಟ್

ಪದ್ಧತಿಯಲ್ಲಿಯೂ ಸಹ ಪಡಿತರ ಚೀಟಿದಾರರಿಗೆ ಆಹಾರಧಾನ್ಯಗಳನ್ನು ಒದಗಿಸುತ್ತಿರುವುದರಿಂದ ಪಡಿತರ ಚೀಟಿದಾರರು ವಂಚಿತರಾಗಿರುವುದಿಲ್ಲ

ಈ) ಹಾಗಿದ್ದಲ್ಲಿ, ಇದನ್ನು ಸರಿಪಡಿಸಲಾಗುವುದೇ?

(ಇ) ಅಂಶಕ್ಕೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನ ಸಂಖ್ಯ **1279(1410)**

ಸದಸ್ಯರ ಹೆಸರು **ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ (ಬೀಳಗಿ)**

ಉತ್ತರಿಸಬೇಕಾದ ಸಚಿವರು **ಶ್ರೀ ಬಿ ನಾಗರಾಜ ಶೆಟ್ಟಿ**

(ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಬಾಗಲಕೋಟೆ ಜಿಲ್ಲೆ ಬೀಳಗಿ ತಾಲ್ಲೂಕಿನಲ್ಲಿ ಕೃಷ್ಣಾ – ಘಟಪ್ರಭಾ ಎರಡು ನದಿಗಳು ಹರಿದಿದ್ದು ಈ ಭಾಗದ ಮೀನುಗಾರಿಕೆಯಲ್ಲಿ ಹಲವಾರು ಕುಟುಂಬಗಳು ತೊಡಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಹೌದು

ಆ) ಈ ಒಳನಾಡು ಮೀನುಗಾರರ ಕುಟುಂಬಕ್ಕಿರುವ ಸರ್ಕಾರದ ಸಹಾಯ ಸೌಕರ್ಯಗಳು ಯಾವುವು,

ಒಳನಾಡು ಮೀನುಗಾರರಿಗೆ ಉತ್ತೇಜನ ನೀಡಲು ಕೆಳಕಂಡಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ

1) ಮೀನು ಮಾರಾಟಕ್ಕಾಗಿ ಮತ್ತು ಮತ್ಸ್ಯವಾಹಿನಿಗೆ ಸಹಾಯ

2) ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ

3) ಮತ್ಸ್ಯಾಶ್ರಯ ಯೋಜನೆಯಡಿ ವಸತಿ ಸೌಲಭ್ಯ

4) ಮೀನುಗಾರ ಮಹಿಳೆಯರಿಗೆ ಮತ್ಸ್ಯ ಸ್ವಾವಲಂಬನಾ ಯೋಜನೆಯಡಿ ಸಹಾಯ

ಗಿರಿಜನ ಉಪಯೋಜನ

ಇ) ಈ ಬಡ ಮೀನುಗಾರರಿಗೆ ಬೀಳಗಿ ತಾಲ್ಲೂಕಿನಲ್ಲಿ ವಸತಿ ಸೌಲಭ್ಯ ಕಲ್ಪಿಸಲಾಗಿದೆಯೇ, ಹಾಗಿದ್ದಲ್ಲಿ ಫಲಾನುಭವಿಗಳೆಷ್ಟು?

ಬಡ ಮೀನುಗಾರರಿಗೆ ಬೀಳಗಿ ತಾಲ್ಲೂಕಿನಲ್ಲಿ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ ಫಲಾನುಭವಿಗಳ ಸಂಖ್ಯೆಯು ಕೆಳಗಿನಂತಿರುತ್ತವೆ

ವರ್ಷ	ಸಂಖ್ಯೆ
2003–04	10
2006–07	10
ಒಟ್ಟು	20